ಇನ್ನೊಂದು ಕಡೆ ಕಾವೇರಿ ನೀರಿನ ವಿಚಾರ ಬಹಳ ಸೂಕ್ಷ್ಮವಾದಂತಹ ವಿಚಾರ. ಅದು ಜನರ ಭಾವನೆಗಳನ್ನು ಕೆರಳಿಸತಕ್ಕಂಥಾದ್ದು. ಹೊಡೆದಾಟ ಮಾಡಿ ಇವತ್ತು ಜನ ಬೀದಿಗಿಳಿಯುವಂತಹ ಪರಿಸ್ಥಿತಿ ಇದೆ.

ಅಧ್ಯಕ್ಷರು : ಇವರು ಮಾತನಾಡಲಿ, ಈಗ ನೀವೇ ಇಲ್ಲಿ ಹೊಡೆದಾಟಕ್ಕೆ ಬರುತ್ತಿದ್ದೀರಲ್ಲ!

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ನೀವು ವಿರೋಧ ಪಕ್ಷದ ನಾಯಕರಾಗಿ ಮುಗ್ಧರಾಗಿ ಕುಳಿತಿದ್ದೀರಿ, ಮೂಕ ಪ್ರೇಕ್ಷಕರಾಗಿದ್ದೀರಿ.

ಅಧ್ಯಕ್ಷರು : ನೀವು ಇಲ್ಲಿ ಹೊಡೆದಾಟ ಮಾಡಬೇಡಿ!

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಸದಾನಂದಗೌಡರು ಕಾನೂನು ಪ್ರಕಾರ ಹೋರಾಡುತ್ತೇನೆಂದು ಹೇಳಿದರು. ಈಗ ನಾನು ಬಾವಿಗೆ ಬಂದು ಕುಳಿತುಕೊಳ್ಳಲೇ?

ಶ್ರೀ ಸಿದ್ದರಾಮಯ್ಯ : ಕುಳಿತುಕೊಳ್ಳಪ್ಪ, ಬೇಡವೆಂದವರ್ಯಾರು?

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಅವರು ನಿಮಗೆ ಬಯ್ಯುವುದು, ಅವರು ಇನ್ನೇನು ಮಾಡುತ್ತಾರೆ? ನಮ್ಮ ಜೊತೆಗೆ ಚೆನ್ನಾಗಿ ಇದ್ದಾರೆ, ಆದರೆ ಒಂದೊಂದು ಬಾರಿ ಈ ರೀತಿ ಹೇಳಿ ಅದು ಪ್ರಚಾರ ಆಗಬೇಕಲ್ಲ.

ಅಧ್ಯಕ್ಷರು : ಆಯಿತು, ತಾವು ಕುಳಿತುಕೊಳ್ಳಿ, ಆಮೇಲೆ ಚರ್ಚೆಗೆ ಅವಕಾಶ ಕೊಡುತ್ತೇನೆ.

(ಇ) ವಿಷಯ: ಕಾವೇರಿ ನೀರಿನ ವಿವಾದ.

ಶ್ರೀ ಸಿದ್ದರಾಮಯ್ಯ : ಮಾನ್ಯ ಶಂಕರಲಿಂಗೇಗೌಡರೇ, ಕುಳಿತುಕೊಳ್ಳಿ. ಮಾನ್ಯ ಅಧ್ಯಕ್ಷರೆ, ಅವರು ನನ್ನ ಮೇಲೆ ಆರೋಪ ಮಾಡುತ್ತಿದ್ದಾರೆ. ಪಾಪ, ಅವರು ನಮ್ಮ ಸ್ನೇಹಿತ. ಅವರು ಕೋಪದಲ್ಲಿ ಒಂದೊಂದು ಸಾರಿ ಹೀಗೆಲ್ಲಾ ಮಾತನಾಡಿಬಿಡುತ್ತಾರೆ. ಕಾವೇರಿ ವಿಚಾರ ಬಹಳ ಗಂಭೀರವಾದಂತಹ ವಿಚಾರ. ಕಾವೇರಿ ನ್ಯಾಯಾಧೀಕರಣ ತೀರ್ಪು ಕೊಟ್ಟಿದೆ. ನಮಗೆ ಅದರಲ್ಲಿ ಅನ್ಯಾಯವಾಗಿದೆ ಎಂದು ನಾವು clarificatiory petition, Supreme Court ನಲ್ಲಿ ಹಾಕಿದ್ದೇವೆ. As a matter of fact, ತೀರ್ಪು ಕೊಟ್ಟಿರುವ ಪ್ರಕಾರ ನಮಗೆ ಕಬಿನಿಯಲ್ಲಿ ನೀರು ಶೇಖರಣೆ ಮಾಡುವುದು, ಅದನ್ನು ಅವರಿಗೆ ಕೊಡುವುದು ಆಗಿಬಿಟ್ಟಿದೆ. ಇಲ್ಲಿ ನೋಡಿದರೆ ತಮಿಳುನಾಡು ಮುಖ್ಯ ಮಂತ್ರಿ ಕು.ಜಯಲಲಿತಾರವರು ನಾವು ಬೇಸಿಗೆ ಬೆಳೆಗೂ ಉಪಯೋಗಿಸಿ

ಕೊಳ್ಳುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ನನಗೆ ಅರ್ಥವಾಗುವುದಿಲ್ಲ. ಹಾಗಾದರೆ ಇವರಿಗೆ ಕೊಟ್ಟು ಬಿಡುವುದಕ್ಕಾ ನಾವು ಕಟ್ಟೆಗಳನ್ನು ಕಟ್ಟಿಕೊಂಡಿರುವುದು? ಎಷ್ಟು ಅನ್ಯಾಯವಾಗುತ್ತಿದೆ ನೋಡಿ. ಆದುದರಿಂದ ಇದು ಬಹಳ ಗಂಭೀರವಾದಂತಹ ವಿಚಾರ ಚರ್ಚೆಯಾಗಬೇಕು. ಸರ್ಕಾರ ಇದರ ಬಗ್ಗೆ ಬಹಳ ಕಠಿಣವಾದಂತಹ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ನೀರು ಬಿಡುವುದರ ವಿಚಾರಕ್ಕೆ ಸಂಬಂಧಪಟ್ಟಂತೆ ಯಾವ ಮಟ್ಟಕ್ಕಾದರೂ ಕೂಡ ಸರ್ಕಾರ ಹೋಗಬೇಕಾಗುತ್ತದೆ. ಒಂದು ತೊಟ್ಟು ನೀರನ್ನೂ ಬಿಡಕೂಡದು. ಅವರು ಕೇಳಿಕೇಳಿದಾಗಲೆಲ್ಲ ನೀರು ಕೊಟ್ಟು ಬಿಟ್ಟು ನಾವು ಈ ಪರಿಸ್ಥಿತಿಗೆ ಸಿಕ್ಕಿಹಾಕಿಕೊಂಡಿರುವುದು. ಇವತ್ತು ಮೈಸೂರು–ಬೆಂಗಳೂರಿನಲ್ಲಿ ಕುಡಿಯುವುದಕ್ಕೇ ನೀರಿಲ್ಲ, ನಾವು ಆ ಪರಿಸ್ಥಿತಿಯಲ್ಲಿದ್ದೇವೆ. ಅದಕ್ಕೆ ಅದರ ಬಗ್ಗೆ ಚರ್ಚೆಯಾಗಬೇಕು. Statement ಆದ ಮೇಲೆ ಚರ್ಚೆಯಾಗಲಿ.

ಅಧ್ಯಕ್ಷರು : ಅದಕ್ಕೆ Statement ಆದಮೇಲೆ ಚರ್ಚೆ ಮಾಡೋಣ.

ಶ್ರೀ ಡಿ.ವಿ. ಸದಾನಂದಗೌಡ : ನೂರಕ್ಕೆ ನೂರು ನೀವು ಹೇಳಿದ ಮಾತು ನಿಜ. Statement ಆದಮೇಲೆ ನಾವು ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ.

ಅಧ್ಯಕ್ಷರು: ಆಯಿತು, Statement ಆದಮೇಲೆ ಚರ್ಚೆ ಮಾಡೋಣ.

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಅದರ ವಿಚಾರವನ್ನೇ ಹೇಳುತ್ತಿರುವುದು. ನೇರವಾಗಿ, ದಿಟ್ಟವಾಗಿ ಕ್ರಮ ತೆಗೆದುಕೊಳ್ಳಿ. ನಿಮ್ಮ ಪರ ನಾವಿರುತ್ತೇವೆ.

ಶ್ರೀ ಸಿದ್ದರಾಮಯ್ಯ : ಬನ್ನಿ ಧರಣಿ ಕುಳಿತುಕೊಳ್ಳಿ. ನಾನೂ ಬರುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಸಭಾಧ್ಯಕ್ಷರೆ, ಸದನದ ಮತ್ತು ರಾಜ್ಯದ ಜನರ ಭಾವನೆಗೆ ಅನುಗುಣವಾಗಿ ಈ ಸರ್ಕಾರ ಮಾಡುತ್ತದೆ. ಇದರಲ್ಲಿ ಯಾವುದೇ compromise ಇಲ್ಲ. ರಾಜ್ಯದ ನೆಲ, ಜಲ ಸಂರಕ್ಷಣೆ ಬಗ್ಗೆ ಇಡೀ ಸದನದ ಎಲ್ಲಾ ತೀರ್ಮಾನಕ್ಕೆ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡುವುದಕ್ಕೆ ಈ ಸರ್ಕಾರ ಬದ್ಧವಾಗಿದೆ. ಇದರ ಬಗ್ಗೆ ಚರ್ಚೆಯಾಗಬೇಕೆಂದು ನಮ್ಮ ಅಭಿಲಾಷೆ ಕೂಡ ಇದೆ. ಏಕೆಂದರೆ ಇದು ರಾಜ್ಯದ ಸಮಗ್ರ ಜನರ ವಿಚಾರಕ್ಕೆ ಸಂಬಂಧಪಟ್ಟಿದ್ದು. ಭಾವನೆಗಳಿಗೆ ಹೆಚ್ಚು ಒತ್ತು ಕೊಡು

ವಂತಹ ಕೆಲಸ ಕಾರ್ಯಗಳನ್ನು ಮಾಡುವಂತಹ ವಿಚಾರವಾದ ಕಾರಣ ನಾವು ಚರ್ಚೆಗೆ ಸಿದ್ಧರಿದ್ದೇವೆ. ಇದರ ಬಗ್ಗೆ Statement ಆದನಂತರ ತಾವು ಸಮಯ ನಿಗದಿಪಡಿಸಿ, ನಾವು ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಎಸ್.ಎಸ್. ಪುಟ್ಟೇಗೌಡ : ಮಾನ್ಯ ಅಧ್ಯಕ್ಷರೆ, ಬೇಸಿಗೆ ಬೆಳೆ ಬೆಳೆಯುವುದಿರಲಿ, ಕುಡಿಯುವುದಕ್ಕೂ ಕೂಡ ನೀರಿಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನದಿ ನೀರಿನ ವಿವಾದದ ಬಗ್ಗೆ, ಗಡಿ ವಿವಾದದ ಬಗ್ಗೆ, ಭಾಷೆಯ ಬಗ್ಗೆ, ನಾವು ಯಾವತ್ತೂ ರಾಜಕಾರಣ ಮಾಡುವುದಕ್ಕೆ ಹೋಗುವುದಿಲ್ಲ. ಜನರ ಮತ್ತು ನಮ್ಮ ರೈತರ ಹಿತ ಬಹಳ ಮುಖ್ಯ. ಅದಕ್ಕೋಸ್ಕರ ನಾವು ಯಾವತ್ತೂ, ಎಲ್ಲಾ ಸಂದರ್ಭ ಗಳಲ್ಲಿ ಕೂಡ ಬೆಂಬಲ ಕೊಟ್ಟುಕೊಂಡು ಬಂದಿದ್ದೇವೆ. ಇವತ್ತೂ ಬೆಂಬಲ ಕೊಡುತ್ತೇವೆ. ಆದರೆ ಸರ್ಕಾರ ಬಹಳ ಗಟ್ಟಿಯಾಗಿ ನಿಲ್ಲಬೇಕು. ಯಾವುದೇ ಕಾರಣಕ್ಕೆ ಒಂದು ತೊಟ್ಟು ನೀರನ್ನೂ ಕೂಡ ನಾವು ಬಿಡುವುದಕ್ಕೆ ಸಾಧ್ಯವಿಲ್ಲ. ಕಾನೂನು ಪ್ರಕಾರ ನಾವು Supreme Court ನಲ್ಲಿ ಅದನ್ನು ವಿರೋಧ ಮಾಡುತ್ತೇವೆ. ನಾವು ಅವರ petition ಅನ್ನು ವಿರೋಧಿಸುತ್ತೇವೆಂದು ಹೇಳಿ, ಇವತ್ತು ಇಡೀ ದೇಶಕ್ಕೆ, ರಾಜ್ಯದ ಜನರಿಗೆ ಮತ್ತು ತಮಿಳುನಾಡಿಗೆ ಸಂದೇಶ ಹೋಗಬೇಕು.

ಅಧ್ಯಕ್ಷರು : ಆಯಿತು, ಆಮೇಲೆ ಈ ವಿಚಾರದ ಬಗ್ಗೆ ಚರ್ಚೆ ಮಾಡೋಣ. Statement ಮಾಡಲಿ. ಈಗ ಬಿ.ಸಿ. ಪಾಟೀಲ್‌ರವರು ಕೇಳಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಒಂದು ಇಲ್ಲಿ ಸಮಸ್ಯೆ ಬಂದಿರುವುದು ರಾಜ್ಯದ ಗಡಿ, ನೀರಿನ ವಿಚಾರ ಬಂದಾಗ ನಾವು ಅವರೆಲ್ಲ ಒಂದೇನೆ. ಆದರೆ ತಮಿಳುನಾಡಿನಲ್ಲಿ ಮುಖ್ಯಮಂತ್ರಿ ಜಯಲಲಿತಾರವರು. . . .

ಅಧ್ಯಕ್ಷರು : ಮೊದಲ Statement ಆಗಲಿ. ದಯವಿಟ್ಟು ಕುಳಿತುಕೊಳ್ಳಿ. ಆಮೇಲೆ ಹೇಳಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಬಾಯಿ ಮುಚ್ಚಿಸತಕ್ಕಂಥಾದ್ದು ಹೇಗೆ?

ಅಧ್ಯಕ್ಷರು : Statement ಆದಮೇಲೆ ಸಲಹೆ ಕೊಡಿ. ಸರ್ಕಾರದ ವತಿಯಿಂದ Statement ಬರಲಿ. ಆಮೇಲೆ ಏನು ಎಂದು ತೀರ್ಮಾನ ಮಾಡೋಣ. ಬಿ.ಸಿ. ಪಾಟೀಲ್‌ರವರು ಕೇಳಿ.